# ಪ್ರಾಯೋಗಿಕ ಧರ್ಮ



❁ ಕಟ್ಟಿಗೆಯಲ್ಲಿ ಬೆಂಕಿ ನಿಶ್ಚಯವಾಗಿ ಇದೆ ಎಂಬ ನಂಬಿಕೆ ಒಂದು; ಕಟ್ಟಿಗೆಯಿಂದ ಬೆಂಕಿ ಉತ್ಪನ್ನ ಮಾಡಿ ಅನ್ನ ಬೇಯಿಸಿ ಊಟಮಾಡಿ ಶಾಂತಿ ಅಥವಾ ತೃಪ್ತಿಯನ್ನು ಪಡೆಯುವುದು ಇನ್ನೊಂದು. ಇವೆರಡಕ್ಕೂ ಅಜಗಜಾಂತರ ವ್ಯತ್ಯಾಸ.

❁ ಒಂದರ ಮೇಲೆ ದೃಢವಿಶ್ವಾಸವುಳ್ಳವರಾಗಿ ಇರಬೇಕು. ಆಳಕ್ಕೆ ಮುಳುಗಿ, ಹಾಗೆ ಮಾಡದಿದ್ದರೆ ಸಮುದ್ರದೊಳಗಿನ ಮುತ್ತುಗಳನ್ನು ಪಡೆಯಲಾಗುವುದಿಲ್ಲ. ನೀರಿನ ಮೇಲೆಯೇ ಕೇವಲ ತೇಲುತ್ತಿದ್ದರೆ ಅದನ್ನು ಪಡೆಯಲಾಗುವುದಿಲ್ಲ.

❁ ಎಲ್ಲರೂ ದೊಡ್ಡ ಮನುಷ್ಯನ ತೋಟವನ್ನು ನೋಡುವುದೇ ತಡ ಬೆರಗಾಗಿ ಬಿಡುತ್ತಾರೆ — ಎಷ್ಟು ಸುಂದರವಾದ ಗಿಡಗಳು, ಎಷ್ಟು ಸುಂದರವಾದ ಹೂವುಗಳು, ಎಷ್ಟು ಸುಂದರವಾದ ಕೊಳಗಳು, ಎಷ್ಟು ಸುಂದರವಾದ ಬೈಠಕ್‌ಖಾನೆ, ಅದರೊಳಗೆ ಎಷ್ಟು ಸುಂದರವಾದ ಪಟಗಳು ಇವುಗಳನ್ನೆಲ್ಲ ನೋಡಿಯೇ ಆಶ್ಚರ್ಯಚಕಿತರಾಗಿಬಿಡುತ್ತಾರೆ. ಆದರೆ ಎಲ್ಲಿ , ತೋಟದ ಯಜಮಾನ ಇದ್ದಾನಲ್ಲ ; ಆ ದೊಡ್ಡ ಮನುಷ್ಯ, ಆತ ಬೇಕೆಂದು ಇಚ್ಛಿಸುವವರು ಎಷ್ಟು ಜನ? ಆತ ಬೇಕು ಎನ್ನುವವರು ಎಲ್ಲೋ ಒಬ್ಬಿಬ್ಬರು. ವ್ಯಾಕುಲನಾಗಿ ಭಗವಂತನನ್ನು ಕರೆದರೆ ಆತನ ದರ್ಶನ ದೊರೆಯುತ್ತದೆ. ಆತನೊಡನೆ ನಾನು ನಿಮ್ಮೊಡನೆ ಈಗ ಮಾತುಕತೆಯಾಡುತ್ತಿರುವಂತೆ ಮಾತುಕತೆಯಾಡಬಹುದು. ಸತ್ಯವಾಗಿ ಹೇಳುತ್ತೇನೆ, ಆತನ ದರ್ಶನ ದೊರೆಯುತ್ತದೆ.

❁ ಶಾಸ್ತ್ರಾಧ್ಯಯನದಿಂದ ಅಬ್ಬಬ್ಬ ಎಂದರೆ ಆತನ ಅಸ್ತಿಮಾತ್ರ ಸಿಗಬಹುದು. ಆದರೆ ತಾನೇ ಸ್ವತಃ ಮುಳುಗದೆ ಇದ್ದರೆ ಭಗವಂತ ಕಾಣಿಸಿಕೊಳ್ಳುವುದಿಲ್ಲ. ಮುಳುಗಿದ ನಂತರ ಆತ ತಾನಾಗಿಯೇ ತೋರಿಸಿಕೊಂಡರೆ ಆಗ ಸಂದೇಹ ನಿವೃತ್ತಿಯಾಗುತ್ತದೆ. ಲೆಕ್ಕವಿಲ್ಲದಷ್ಟು ಪುಸ್ತಕ ಓದು, ಬಾಯಿಂದ ಬೇಕಾದಷ್ಟು ಶ್ಲೋಕಗಳನ್ನು ಹೇಳು. ವ್ಯಾಕುಲನಾಗಿ ಮುಳುಗು ಹಾಕದೆ ಇದ್ದರೆ ಆತನ ಸಾಕ್ಷಾತ್ಕಾರ ಸಾಧ್ಯವಿಲ್ಲ. ಬರೇ ಪಾಂಡಿತ್ಯದಿಂದ ಮನುಷ್ಯನನ್ನು ಮುಗ್ಧಗೊಳಿಸಲು ಸಾಧ್ಯ, ಆದರೆ ಆತನನ್ನು ಪಡೆಯಲು ಸಾಧ್ಯವಿಲ್ಲ.

❁ ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅತ್ಯಂತ ನಿರ್ಜನಪ್ರದೇಶದಲ್ಲಿ ಇದ್ದು ಸಾಧನೆಮಾಡಬೇಕು. ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು, ದನಕರುಗಳು ಅದನ್ನು ತಿಂದು ನಾಶಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಆವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ, ಶಕ್ತಿಯನ್ನು ವೃದ್ಧಿಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮ ಕಾಂಚನ ನಿನ್ನನ್ನು ಏನೂ ಮಾಡಲಾರವು.

❁ ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು, ಇನ್ನೊಂದು ಕೈಯಿಂದ ಕೆಲಸ ಕಾರ್ಯಗಳನ್ನು ಮಾಡುತ್ತಿರಬೇಕು. ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೋ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೇ ನಿರತನಾಗಿರಬೇಕು.

❁ ಜ್ಞಾನೋದಯವಾದರೆ ಆತ ದೂರದಲ್ಲಿದ್ದಾನೆ ಎಂಬುದಾಗಿ ಅನಿಸುವುದಿಲ್ಲ. ಆಗ ಅವನು ಅವನಾಗಿ ತೋರುವುದಿಲ್ಲ. ಇವನಾಗಿಬಿಡುತ್ತಾನೆ. ಆಗ ಅವನನ್ನು ಹೃದಯದ ಮಧ್ಯದಲ್ಲಿ ನೋಡಬಹುದು. ಆತ ಎಲ್ಲರ ಅಂತರ್ಯದಲ್ಲಿಯೂ ಇದ್ದಾನೆ. ಅರಸಿದವರಿಗೆ ದೊರೆತುಬಿಡುತ್ತಾನೆ.

❁ ವ್ಯಾಕುಲನಾಗಿ ಭಗವತಿಯನ್ನು ಕರೆ. ಆಕೆಯ ದರ್ಶನ ದೊರೆತರೆ ವಿಷಯರಸ ಒಣಗಿಹೋಗಿಬಿಡುತ್ತದೆ; ಕಾಮಕಾಂಚನ ಆಸಕ್ತಿ ಎಲ್ಲಾ ಬಿಟ್ಟು ಹೋಗುತ್ತದೆ. ಆಕೆ ನಿನ್ನ ಸ್ವಂತ ತಾಯಿ ಎಂಬ ಬೋಧೆ ಉಂಟಾದರೆ ಈ ಕ್ಷಣವೆ ಹಾಗಾಗಿಬಿಡುತ್ತದೆ.

❁ ಮನುಷ್ಯನಿಗೆ ಭಗವಂತನಲ್ಲಿ ವಿಶ್ವಾಸವಿಲ್ಲ; ಅದಕ್ಕಾಗಿಯೇ ಆತ ಅಷ್ಟೊಂದು ದುಃಖವನ್ನು ಅನುಭವಿಸುವುದು. ಜನ ಹೇಳುತ್ತಾರೆ, 'ಗಂಗಾಸ್ನಾನದ ಸಮಯದಲ್ಲಿ ಜನರ ಪಾಪಗಳೆಲ್ಲ ಅವರವರನ್ನು ಬಿಟ್ಟು ಗಂಗೆಯ ತೀರದಲ್ಲಿರುವ ಗಿಡಗಳ ಮೇಲೆ ಕುಳಿತುಕೊಂಡಿರುತ್ತವೆ. ಸ್ನಾನ ಮುಗಿಸಿ ದಡಕ್ಕೆ ಬರುವುದೇ ತಡ ಒಡನೆಯೇ ಅವು ನೆಗೆದು ಅವರವರ ಹೆಗಲನ್ನು ಹತ್ತಿಬಿಡುತ್ತವೆ' ಎಂದು. ದೇಹತ್ಯಾಗದ ಸಮಯದಲ್ಲಿ ಭಗವಂತನ ಚಿಂತನೆ ಬರಬೇಕಾದರೆ, ಬದುಕಿರುವಾಗಲೆ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಳ್ಳಬೇಕು. ಸಿದ್ಧತೆ – ಅಭ್ಯಾಸಯೋಗ, ಭಗವಚ್ಚಿಂತನೆಯ ಅಭ್ಯಾಸವನ್ನು ಮಾಡಿದ್ದರೆ ಜೀವನದ ಕೊನೆಯ ದಿನವೂ ಆತನ ಭಾವನೆ ಮನಸ್ಸಿನಲ್ಲಿ ಏಳುತ್ತದೆ.

ಶ್ರೀರಾಮಕೃಷ್ಣ ವಚನವೇದದಿಂದ